2318(2053) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಯಾವ ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು;

ಆ) ಇದಕ್ಕೆ ತಗಲುವ ವೆಚ್ಚವೆಷ್ಟು (ನಿಲ್ದಾಣವಾರು ವೆಚ್ಚದ ವಿವರಗಳನ್ನು ನೀಡುವುದು);

ಇ) ಪ್ರಸಕ್ತ ಸಾಲಿನಿಂದಲೇ ಎಷ್ಟು ಹೊಸ ಮಾರ್ಗಗಳನ್ನು ಮಂಜೂರು ಮಾಡಲು ಸರ್ಕಾರ ಉದ್ದೇಶಿಸಿದೆ ಮಾರ್ಗವಾರು ವಿವರಗಳನ್ನು ನೀಡುವುದು;

ಈ) ಈ ಹೊಸ ಮಾರ್ಗಗಳಲ್ಲಿ ಗ್ರಾಮೀಣ ಪ್ರದೇಶದ ಪಾಲೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 103 ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸುವ ಯೋಜನೆಯು ಪರಿಶೀಲನೆಯಲ್ಲಿದೆ.

ಆ) ಬಸ್ ನಿಲ್ದಾಣವಾರು ವಿವರವಾದ ವೆಚ್ಚವನ್ನು ಅಂದಾಜಿಸಲಾಗುತ್ತಿದೆ.

ಇ) 2005–2006ನೇ ಸಾಲಿಗೆ 600 ಹೊಸ ಅನುಸೂಚಿಗಳನ್ನು ಕಾರ್ಯಚರಣೆ ಮಾಡಲು ಉದ್ದೇಶಿಸಿದ್ದು ಮಾರ್ಗಗಳನ್ನು ಗುರುತಿಸಲಾಗುತ್ತಿದೆ.

ಈ) ಸುಮಾರು 50 ಪ್ರತಿಶತ ಗ್ರಾಮಾಂತರ ಪ್ರದೇಶದಲ್ಲಿ ನಡೆಸಲು ಉದ್ದೇಶಿಸಿದೆ.

2319(2054) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಎಲ್ಲಾ ಜಲಾಶಯಗಳ ಸಲಹಾ ಸಮಿತಿಗಳನ್ನು ರಚಿಸಲಾಗಿದೆಯೇ;

ಆ) ರಚಿಸದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ರಚಿಸಿದ್ದಲ್ಲಿ, ಯಾವ ಯಾವ ದಿನಾಂಗಳಂದು ಯಾವ ಯಾವ ಜಲಾಶಯಗಳ ಸಮಿತಿಗಳನ್ನು ರಚಿಸಲಾಗಿದೆ (ಜಲಾಶಯವಾರು ಪಟ್ಟಿ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ನೀರಾವರಿ ಸಲಹಾ ಸಮಿತಿಗಳನ್ನು ಈ ಕೆಳಕಂಡ ಯೋಜನೆಗಳಿಗೆ ರಚಿಸಲಾಗಿದೆ.

1) ಕೃಷ್ಣಾ ಮೇಲ್ದಂಡೆ ಯೋಜನೆ
2) ಮಲಪ್ರಭಾ ಮತ್ತು ಘಟಪ್ರಭಾ ಜಲಾಶಯ
3) ಕೆ.ಆರ್.ಎಸ್. ಕಬಿನಿ, ಹಾರಂಗಿ ಮತ್ತು ಹೇಮಾವತಿ
4) ತುಂಗಾಭದ್ರಾ ಜಲಾಶಯ ಹಾಗೂ ವಿಜಯನಗರ ಕಾಲುವೆಗಳು
5) ಭದ್ರಾ ಯೋಜನೆ